**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**

**ಸಿಸಿ ನಂ. 117/2018**

**ಚಾಸಾ-1/ಪಿಡಬ್ಲೂ-19**

| | |
|---|---|
| **ಹೆಸರು** | ಭಾಗಣ್ಣ |
| **ತಂದೆ ಹೆಸರು** | ಸಾಯಬಣ್ಣ ದೊಡ್ಡಮನಿ |
| **ವಯಸ್ಸು** | 55 ವರ್ಷ |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಕೊಳಕೂರ ಗ್ರಾಮ ತಾಃ ಜೇವರ್ಗಿ |

**ಸಾಕ್ಷಿಯನ್ನ ದಿನಾಂಕಾ 31-01-2019 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.**

ನನಗೆ ಚಾಸಾ-2 ರಿಂದ 21 ಗೊತ್ತು. ಅದೇ ರೀತಿ ಈಗ ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರು ನನಗೆ ಗೊತ್ತು.

ನನಗೆ ಸೇರಿದ ಸರ್ವೆ ನಂಬರ್ 299 ರ 05-00 ಎಕರೆ ವಿಸ್ತೀರ್ಣದ ಪೈಕಿ 00-24 ಗುಂಟೆ ಜಮೀನು ಕಾಲುವೆಗಾಗಿ ಭೂಸ್ವಾಧೀನವಾಗಿರುತ್ತದೆ. 1 ನೇ ಆರೋಪಿಯ ತಂದೆ ಹೆಸರು ನನ್ನ ಹೆಸರು ಒಂದೇ ಇರುತ್ತದೆ. ಅದನ್ನ 1 ನೇ ಆರೋಪಿ ದುರಪಯೋಗ ಮಾಡಿಕೊಂಡು ಕಾಲುವೆಗೆ ಭೂಸ್ವಾಧೀನವಾಗಿರುವುದಕ್ಕೆ ಸಂಬಂಧಿಸಿದಂತೆ ನಿರಾಶ್ರಿತರ ಪ್ರಮಾಣ ಪತ್ರವನ್ನ ಪಡೆದಿರುತ್ತಾರೆ ಸದರಿ ನಿರಾಶ್ರಿತರ ಪ್ರಮಾಣ ಪತ್ರದ ಮೇರೆಗೆ 1 ನೇ ಆರೋಪಿ ನೌಕರಿ ಪಡೆದಿರುತ್ತಾನೆ. 1 ನೇ ಆರೋಪಿ ನನಗೆ ಸಂಬಂಧಿಕನಲ್ಲ. ಆರೋಪಿಗಳ ಸರ್ವೆ ನಂಬರ್ 333. 1 ನೇ ಆರೋಪಿಗೆ ಮತ್ತು ನನಗೆ ಸೇರಿದ ಸರ್ವೆ ನಂಬರ್ 299 ಕ್ಕೆ ಯಾವುದೇ ಸಂಬಂಧವಿರುವುದಿಲ್ಲ. ಸದರಿ ಸಂಗತಿ ನನಗೆ ಗೊತ್ತಾದ ನಂತರ 1 ನೇ ಆರೋಪಿ ಮೊಸ ಮಾಡಿದ ಬಗ್ಗೆ ತಹಸಿಲ್ದಾರರಿಗೆ ಅರ್ಜಿ ಸಲ್ಲಿಸಿರುತ್ತೇನೆ. ಅದೇ ರೀತಿ ಪೊಲೀಸ ಠಾಣೆಗೆ ಹೋಗಿ ಅರ್ಜಿ ಕೊಟ್ಟಿರುತ್ತೇನೆ. ಪೊಲೀಸರು ಕೇಸು ತೆಗೆದುಕೊಂಡಿರುವುದಿಲ್ಲ. ನಂತರ ವಕೀಲರ ಮುಖಾಂತರ ನ್ಯಾಯಾಲಯದಲ್ಲಿ ಫಿರ್ಯಾದು ಸಲ್ಲಿಸಿರುತ್ತೇನೆ. ಫಿರ್ಯಾದು ಮತ್ತು ತಹಸಿಲ್ದಾರರಿಗೆ ನೀಡಿದ್ದ ಅರ್ಜಿಯನ್ನ ನೋಡಿದರೆ ಗುರುತಿಸುತ್ತೇನೆ. ಅವುಗಳಿಗೆ ನಾನು ಹೆಬ್ಬೆಟ್ಟಿನ ಗುರುತುಗಳನ್ನ ಹಾಕಿರುತ್ತೇನೆ. ಸಾಕ್ಷಿ ಫಿರ್ಯಾದು ಮತ್ತು ಸದರಿ ಅರ್ಜಿಯನ್ನ ಗುರುತಿಸಿದ್ದು ಅವುಗಳನ್ನ ಕ್ರಮವಾಗಿ ನಿಪಿ41 ಮತ್ತು ನಿಪಿ-42 ಎಂದು ಗುರುತಿಸಲಾಯಿತು.

ನನ್ನ ಜಮೀನಿನ ಪಹಣಿ ಪತ್ರಿಕೆಯನ್ನ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಹಣಿ ಪತ್ರಿಕೆಗಳನ್ನ ಗುರುತಿಸಿದ್ದು. ಅವುಗಳನ್ನ ನಿಪಿ-43 ರಿಂದ 46 ಎಂದು ಗುರುತಿಸಲಾಯಿತು. 1 ನೇ ಆರೋಪಿಯ ಪಹಣಿ ಪತ್ರಿಕೆಗಳನ್ನ ನೋಡಿದರೆ ಗುರುತಿಸಲಾಗುವುದಿಲ್ಲ. ಆರೋಪಿ ನಿರಾಶ್ರಿತರ ಪ್ರಮಾಣ ಪತ್ರವನ್ನ ಪಡೆದು ನನ್ನ ಕುಟುಂಬಕ್ಕೆ ಮೋಸ ಮಾಡಿರುತ್ತಾನೆ. 2 ನೇ ಆರೋಪಿ 1 ನೇ ಆರೋಪಿಗೆ ದಾಖಲೆಗಳನ್ನ ತಯಾರು ಮಾಡಿಕೊಟ್ಟಿರುತ್ತಾನೆ.

**ನ್ಯಾಯಾಲಯದ ಕಾಲಾವಕಾಶ ಮುಗಿದಿದ್ದರಿಂದ ಸಾಕ್ಷಿಯ ಪಾಟೀ ಸವಾಲನ್ನ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,**
**ಜೇವರ್ಗಿ**